## ಕರ್ನಾಟಕ ಸರ್ಕಾರ

ಪತ್ರ ಸಂಖ್ಯೆ:ಆರ್‌ಡಿ 54 ಡಿಎಸ್‌ಪಿ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:-18-08-2011.

### ಸುತ್ತೋಲೆ

ವಿಷಯ: ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಆಯೋಜಿಸುವ ವಿಧಿವಿಧಾನಗಳ ಬಗ್ಗೆ

ಉಲ್ಲೇಖ: 1) ಬಾಲ್ಯ ವಿವಾಹಗಳನ್ನು ತಡೆಗಟ್ಟುವ ಬಗ್ಗೆ ಡಾ|| ಶಿವರಾಜ್ ವಿ. ಪಾಟೀಲ್ ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾದೀಶರ ವರದಿ

2) ದಿನಾಂಕ 14.07.2011 ರಂದು ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ

*****

ಸಾಮೂಹಿಕ ವಿವಾಹಗಳು ಇತ್ತೀಚಿನ ದಿನಗಳಲ್ಲಿ ಜನಪ್ರಿಯಗೊಳ್ಳುತ್ತಿದ್ದು, ಇದು ವಿವಾಹದ ಹೆಸರಿನಲ್ಲಿ ದುಂದುವೆಚ್ಚಗಳ ಮೇಲೆ ಕಡಿವಾಣ ಹಾಕುವುದರೊಂದಿಗೆ ಸರಳ ವಿವಾಹಗಳಿಗೆ ಪ್ರೋತ್ಸಾಹ ಮಾಡುತ್ತದೆ. ಈ ನಿಟ್ಟಿನಲ್ಲಿ ಸಾಮೂಹಿಕ ವಿವಾಹಗಳ ಕಾರ್ಯಕ್ರಮಗಳನ್ನು ಖಾಸಗಿ ವ್ಯಕ್ತಿಗಳು, ಸಂಘಟನೆಗಳು, ದೇವಸ್ಥಾನಗಳು, ಟ್ರಸ್ಟ್‌ಗಳು ಇತ್ಯಾದಿ ಸಂಘಸಂಸ್ಥೆಗಳು ಆಯೋಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸಾಮೂಹಿಕ ವಿವಾಹಗಳನ್ನು ಸಮರ್ಪಕವಾಗಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆಯೋಜಿಸುವ ಹಾಗೂ ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಗಳನ್ನು ತಡೆಗಟ್ಟುವ ದೃಷ್ಟಿಯಿಂದ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

### ಸಾಮೂಹಿಕ ವಿವಾಹಗಳ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು ಮಾರ್ಗಸೂಚಿಗಳು:

**I. ಸಾಮೂಹಿಕ ವಿವಾಹಗಳ ಆಯೋಜಕರು ಕಡ್ಡಾಯವಾಗಿ ತಮ್ಮ ಸಂಸ್ಥೆಗಳನ್ನು ನೋಂದಣಿ ಮಾಡಿಸುವ ಬಗ್ಗೆ.**

1. ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ಖಾಸಗಿ ಟ್ರಸ್ಟ್‌ಗಳು, ದೇವಸ್ಥಾನದ ಟ್ರಸ್ಟ್‌ಗಳು ಸಂಘಗಳು, ಸೊಸೈಟಿಗಳು ಮತ್ತು ಖಾಸಗಿ ವ್ಯಕ್ತಿಗಳು ಇತ್ಯಾದಿ ಜಿಲ್ಲಾ ನೋಂದಣಿ ಕಛೇರಿಯಲ್ಲಿ ಸಾಮೂಹಿಕ ವಿವಾಹಗಳ ಆಯೋಜಕರೆಂದು ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು.
2. ಒಂದು ಬಾರಿ ನೋಂದಾಯಿಸಿದ ನಂತರ, ಪ್ರತಿ ಐದು ವರ್ಷಕ್ಕೊಮ್ಮೆ ನೋಂದಣಿಯನ್ನು ನವೀಕರಿಸತಕ್ಕದ್ದು.
3. ಆಯೋಜಕರು ಜಿಲ್ಲಾ ನೋಂದಣಾಧಿಕಾರಿಗಳ ಬಳಿ ನೋಂದಾಯಿಸುವ ಸಂದರ್ಭದಲ್ಲಿ ಕೆಳಕಂಡ ದಾಸ್ತಾವೇಜುಗಳನ್ನು ಸಲ್ಲಿಸತಕ್ಕದ್ದು.

   i) ಆಯೋಜಕರ ಹೆಸರು, ವಿಳಾಸ ಹಾಗೂ ವಿಳಾಸದ ಪ್ರಮಾಣ ಪತ್ರ

   ii) ಟ್ರಸ್ಟ್ ಅಥವಾ ಸೊಸೈಟಿ ಆಗಿದ್ದಲ್ಲಿ ಅದರ ನೋಂದಣಿ ಪ್ರಮಾಣ ಪತ್ರ.

   iii) ಸಾಮೂಹಿಕ ವಿವಾಹ ಕಾರ್ಯಕ್ರಮದ ಸಂದರ್ಭದಲ್ಲಿ ಯಾವುದೇ ಬಾಲ್ಯ ವಿವಾಹಗಳು ನಡೆಯುವುದಿಲ್ಲ ಹಾಗೂ ನಡೆಯಲು ಅವಕಾಶಕೊಡುವುದಿಲ್ಲ ಎಂದು ಪ್ರಮಾಣ ಪತ್ರ.

4. ಸಾಮೂಹಿಕ ವಿವಾಹಗಳ ಆಯೋಜಕರು ನೋಂದಾಯಿಸದ ಪಕ್ಷದಲ್ಲಿ ಸಾಮೂಹಿಕ ವಿವಾಹಗಳನ್ನು ಸಂಘಟಿಸಬಾರದು.
5. ಸಾಮೂಹಿಕ ವಿವಾಹ ಕಾರ್ಯಕ್ರಮದ ನೋಂದಣಿ ಪ್ರಮಾಣ ಪತ್ರವನ್ನು ಸಾಮೂಹಿಕ ವಿವಾಹಗಳನ್ನು ಆಯೋಜಿಸಲು ಅನುಮತಿ ಪಡೆಯುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.
6. ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಬಾಲ್ಯ ವಿವಾಹಗಳು ನಡೆದ ಬಗ್ಗೆ ಮಾಹಿತಿ ದೊರತ ಪಕ್ಷದಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ತಕ್ಷಣವೇ ರದ್ದುಗೊಳಿಸುವ ಅಧಿಕಾರ ನೋಂದಣಾಧಿಕಾರಿಗಳಿಗಿರುತ್ತದೆ.

**II ಸಾಮೂಹಿಕ ವಿವಾಹಗಳನ್ನು ಆಯೋಜಿಸಲು ಸಂಬಂಧಪಟ್ಟ ಪ್ರಾಧಿಕಾರಿಯಿಂದ ಅನುಮತಿ ಪಡೆಯುವ ಬಗ್ಗೆ:**

ಸಾಮೂಹಿಕ ವಿವಾಹಗಳನ್ನು ಆಯೋಜಕರು ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರಿಗೆ ಸಾಮೂಹಿಕ ವಿವಾಹಗಳನ್ನು ನಡೆಸಲು ಅನುಮತಿ ಕೋರಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಯ ಜೊತೆ ಕೆಳಕಂಡ ದಾಸ್ತಾವೇಜುಗಳನ್ನು ಲಗತ್ತಿಸತಕ್ಕದ್ದು:

i. ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವ ವಧು ಮತ್ತು ವರನ ಪ್ರತ್ಯೇಕ ಭಾವಚಿತ್ರ ಲಗತ್ತಿಸತಕ್ಕದ್ದು
ii. ವಯಸ್ಸಿನ ದೃಢೀಕರಣ ಪತ್ರ – ಜನನ ಪ್ರಮಾಣ ಪತ್ರ ಅಥವಾ ಶಾಲಾ ಪ್ರಮಾಣ ಪತ್ರ ಅಥವ ಸಂಬಂಧ ಪಟ್ಟ ಸರ್ಕಾರಿ ವೈದ್ಯಕೀಯ ಪ್ರಾಧಿಕಾರಿಯಿಂದ ವಯಸ್ಸಿನ ಪ್ರಮಾಣ ಪತ್ರ ಪಡೆಯತಕ್ಕದ್ದು (ವಯಸ್ಸಿನ ದೃಢೀಕರಣ ಪತ್ರದ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)
iii. ವಾಸ ಸ್ಥಳ ಪ್ರಮಾಣ ಪತ್ರ – ಪಡಿತರ ಚೀಟಿ, ಚುನಾವಣಾ ಗುರುತಿನ ಪತ್ರ, ಪಾಸ್/ ಪೋರ್ಟ್ ಅಥವಾ ಡ್ರೈವಿಂಗ್ ಲೈಸನ್ಸ್
iv. ವಧು ಮತ್ತು ವರನ ಪೋಷಕ / ತಂದೆ /ತಾಯಿ ಯರಿಂದ ವಧು ಮತ್ತು ವರರಿಗೆ ವಿವಾಹಯೋಗ್ಯ ವಯಸ್ಸಾಗಿರುತ್ತದೆ ಎಂಬ ದೃಢೀಕರಣ ಪತ್ರ ಮತ್ತು ವಧು / ವರನ ಒಪ್ಪಿಗೆ.

**III ಅರ್ಜಿಗಳನ್ನು ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರಿಗೆ ಸಲ್ಲಿಸುವ ಕಾಲಮಿತಿ.**

**ಸಾಮೂಹಿಕ ವಿವಾಹಗಳ ಆಯೋಜಕರು, ಅರ್ಜಿಗಳನ್ನು ನಿಗದಿತ ಕಾಲಮಿತಿಯೊಳಗೆ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು.**

1. ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವ ಜೋಡಿಗಳ ಸಂಖ್ಯೆ 100 ಕ್ಕಿಂತ ಕಡಿಮೆ ಇದ್ದರೆ ವಿವಾಹ ದಿನಾಂಕಕ್ಕೆ 20 ದಿನಗಳ ಮುಂಚಿತವಾಗಿ ತಿಳಿಸಬೇಕು.
2. ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವ ಜೋಡಿಗಳ ಸಂಖ್ಯೆ 200 ಕ್ಕಿಂತ ಕಡಿಮೆ ಇದ್ದರೆ ವಿವಾಹ ದಿನಾಂಕಕ್ಕೆ 40 ದಿನಗಳ ಮುಂಚಿತವಾಗಿ ತಿಳಿಸಬೇಕು.
3. ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವ ಜೋಡಿಗಳ ಸಂಖ್ಯೆ 200ಕ್ಕೆ ಮೇಲ್ಪಟ್ಟಿದ್ದರೆ ವಿವಾಹ ದಿನಾಂಕಕ್ಕೆ 60 ದಿನಗಳ ಮುಂಚಿತವಾಗಿ ತಿಳಿಸಬೇಕು.
4. ಯಾವುದೇ ಕಾರಣಕ್ಕೆ ನಿಗದಿತ ಕಾಲ ಮಿತಿಯೊಳಗೆ ಸಲ್ಲಿಸದ ಅರ್ಜಿಗಳನ್ನು ಸ್ವೀಕರಿಸಬಾರದು.

IV. ಅರ್ಜಿಗಳನ್ನು ಪರಿಶೀಲಿಸುವ ಬಗ್ಗೆ : ತಾಲ್ಲೂಕಿನ ತಹಸೀಲ್ದಾರರು ಅರ್ಜಿಗಳನ್ನು ಹಾಗೂ ಸಂಬಂಧಪಟ್ಟ ದಾಸ್ತಾವೇಜುಗಳನ್ನು ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು / ನೌಕರರ ಸಹಾಯದೊಂದಿಗೆ ಪರಿಶೀಲಿಸತಕ್ಕದ್ದು.

V. ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ನೀಡಿರುವ ಪತ್ರದೊಂದಿಗೆ ಪರಿಶೀಲಿಸಿದ ಅರ್ಜಿಗಳ ಪಟ್ಟಿ ಹಾಗೂ ವಿವಾಹ ಕಾರ್ಯಕ್ರಮದ ದಿನಾಂಕ, ಸ್ಥಳ ಮತ್ತು ಸದರಿ ಕಾರ್ಯಕ್ರಮದಲ್ಲಿ ವಿವಾಹವಾಗುವ ಜೋಡಿಗಳ ಸಂಖ್ಯೆ ಮತ್ತು ಅವರುಗಳ ವಿವರಗಳನ್ನು ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಲಭ್ಯವಿರುವಂತೆ ಸಂಬಂಧಪಟ್ಟ ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿಗಳು ನೋಡಿಕೊಳ್ಳತಕ್ಕದ್ದು.

VI. ಪರಿಶೀಲಿಸಿದ ಪಟ್ಟಿಯಲ್ಲಿ ಹೆಸರಿಲ್ಲದೇ ಇರುವಂತಹ ಯಾವುದೇ ಜೋಡಿಗಳ ವಿವಾಹವನ್ನು ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನಡೆಸತಕ್ಕದ್ದಲ್ಲ.

VII. ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಧುವಿನ ವಯಸ್ಸು 18 ವರ್ಷಕ್ಕಿಂತ ಕಡಿಮೆ ಹಾಗೂ ವರನ ವಯಸ್ಸು 21 ವರ್ಷ ವಯಸ್ಸಿಗಿಂತ ಕಡಿಮೆ ಇರತಕ್ಕದ್ದಲ್ಲ. ವಧು/ವರನ ನಿಗದಿತ ವಯಸ್ಸಿಗಿಂತ ಕಡಿಮೆ ಇದ್ದ ಪಕ್ಷದಲ್ಲಿ ಅಥವ ವದು / ವರ ಈಗಾಗಲೇ ಮದುವೆಯಾಗಿರುವರೆಂದು ಸಂಶಯಬಂದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸತಕ್ಕದ್ದು ಮತ್ತು ವಿಷಯವನ್ನು ಸಾಮೂಹಿಕ ವಿವಾಹ ಆಯೋಜಕರ ಗಮನಕ್ಕೆ ತರತಕ್ಕದ್ದು.

VIII. ಸಾರ್ವಜನಿಕ ವಿವಾಹ ಅಯೋಜಕರು ವಿವಾಹ ನಡೆಯುವ ಸ್ಥಳದಲ್ಲಿ ಕಡ್ಡಾಯವಾಗಿ ವಿವಾಹ ನಡೆಯುವ ಸ್ಥಳದಲ್ಲಿ ಬಾಲ್ಯ ವಿವಾಹ ನಿಷೇದಕ್ಕೊಳಪಟ್ಟಿದೆ ಹಾಗೂ ಬಾಲ್ಯ ವಿವಾಹವು ಶಿಕ್ಷಾರ್ಹವಾದ ಅಪರಾದವಾಗಿದೆ ಎಂಬ ಪ್ರಚಾರ ಫಲಕಗಳನ್ನು ಜಾಹಿರಾತು ಮಾಡತಕ್ಕದ್ದು.

IX. ಶಿಶು ಅಭಿವೃದ್ಧಿ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಕಂದಾಯ ನಿರೀಕ್ಷಕರು ಕಡ್ಡಾಯವಾಗಿ ಸಾರ್ವಜನಿಕ ವಿವಾಹ ನಡೆಯುವ ಸ್ಥಳದಲ್ಲಿ ಹಾಜರಿರತಕ್ಕದ್ದು ಮತ್ತು ಬಾಲ್ಯ ವಿವಾಹಗಳು ಯಾವುದೇ ಕಾರಣಕ್ಕೆ ನಡೆಯದಂತೆ ನೋಡಿಕೊಳ್ಳತಕ್ಕದ್ದು.

X. ಸಾಮೂಹಿಕ ವಿವಾಹ ಕಾರ್ಯಕ್ರಮದ ವಿಡಿಯೋ ಚಿತ್ರೀಕರಣ ಹಾಗೂ ಫೋಟೋಗಳನ್ನು (ಸ್ಥಿರ ಚಿತ್ರಗಳನ್ನು) ಭಾವಚಿತ್ರಗಳನ್ನು ಆಯೋಜಕರು ಸಂಬಂಧಪಟ್ಟ ತಾಲ್ಲೂಕು ಶಿಶು ಅಭಿವೃದ್ಧಿ ಅಧಿಕಾರಿಗಳಿಗೆ ವಿವಾಹ ಕಾರ್ಯಕ್ರಮ ನಡೆದ ಒಂದು ವಾರದೊಳಗೆ ಸಲ್ಲಿಸತಕ್ಕದ್ದು.

XI. ಅರ್ಜಿಗಳನ್ನು ಪರಿಶೀಲಿಸುತ್ತಿರುವ / ಪರಿಶೀಲಿಸಿದ ಅಧಿಕಾರಿಗಳ / ಪ್ರಾಧಿಕಾರಿಗಳ ಮೇಲೆ ಯಾವುದೇ ರೀತಿಯ ಒತ್ತಡವನ್ನು ತಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆ.

XII. ವಧು / ವರನ ವಯಸ್ಸು ನಿಗದಿಪಡಿಸಿದ ಯೋಗ್ಯ ವಿವಾಹ ವಯಸ್ಸಿಗಿಂತ ಕಡಿಮೆ ಇದ್ದಲ್ಲಿ ಬಾಲ್ಯ ವಿವಾಹ ನಿಶೇಷ ಅಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಸಾರ್ವಜನಿಕ ವಿವಾಹ ಆಯೋಜಕರ ಮೇಲೆ ಸಂಬಂಧಪಟ್ಟ ಆರಕ್ಷಕ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸುವ ಅವಕಾಶವಿರುತ್ತದೆ.

XIII. ಸಾರ್ವಜನಿಕ ವಿವಾಹ ಕಾರ್ಯ ನಡೆದ ಪ್ರತಿಯೊಂದು ಜೋಡಿಯ ವಿವಾಯವನ್ನು ಕಡ್ಡಾಯವಾಗಿ ಕರ್ನಾಟಕ ವಿವಾಹ (ನೋಂದಣಿ ಮತ್ತು ಇತರೆ) ಅಧಿನಿಯಮ, 1976 ಮತ್ತು ನಿಯಮಾವಳಿಗಳು 2006 ರಂತೆ ನೋಂದಣಿ ಮಾಡತಕ್ಕದ್ದು. ಸುತ್ತೋಲೆ ಸಂಖ್ಯೆ ಆರ್‌ಡಿ 54 ಡಿಎಸ್‌ಪಿ 2011 ದಿನಾಂಕ 25.07.2011 ರಂತೆ ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗಳು ವಿವಾಹ ನೋಂದಣಿ ಅಧಿಕಾರಿಗಳಾಗಿ ತಮ್ಮ ಕಾರ್ಯ ವ್ಯಾಪ್ತಿಗೆ ಬರುವ ಗ್ರಾಮ/ವಾರ್ಡ್‌ಗಳಲ್ಲಿ ವಿವಾಹ ನೋಂದಣಿ ಅಧಿಕಾರಿಯಾಗಿ ಕೆಲಸ ನಿರ್ವಹಿಸ ಬಹುದಾಗಿರುತ್ತದೆ. ಅದರಂತೆ, ವಿವಾಹ ನೋಂದಣಿ ಅಧಿಕಾರಿಗಳು ವಿವಾಹ ನಡೆಯುವ ಕಾರ್ಯ ಕ್ರಮ ಸ್ಥಳದಲ್ಲಿ ಹಾಜರಿದ್ದು ನೋಂದಣಿ ಮಾಡತಕ್ಕದ್ದು. ಕಾರಣಾಂತರಗಳಿಂದ ಕೆಲವು ವಿವಾಹಗಳನ್ನು ನೋಂದಣಿ ಮಡಲು ಸಾಧ್ಯವಾಗದಿದ್ದಲ್ಲಿ ಅಂತಹ ವಿವಾಹಗಳನ್ನು ವಿವಾಹ ನಡೆದ ಒಂದು ತಿಂಗಳೊಳಗಾಗಿ ನೋಂದಣಿ ಮಾಡತಕ್ಕದ್ದು. ಪೋಷಕರು / ಆಯೋಜಕರು ವಿವಾಹಗಳನ್ನು ನೋಂದಾಯಿಸಲು ಜವಾಬ್ದಾರರಾಗಿರುತ್ತಾರೆ.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು

XIV. ~~ಶಿಕ್ಷಣ ಅಭಿವೃದ್ಧಿ~~ / ಬಾಲ್ಯ ವಿವಾಹ ನಿಷೇದ ಅಧಿಕಾರಿಗಳು ಸಾಮೂಹಿಕ ವಿವಾಹಗಳು ನಡೆದ ಬಗ್ಗೆ ಪ್ರತಿ ತಿಂಗಳು ವರದಿಯನ್ನು ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಉಪ ವಿಭಾಗ ಅಧಿಕಾರಿಗಳು / ಉಪ ನಿರ್ದೇಶಕರು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ / ತಹಸೀಲ್ದಾರರಿಗೆ ಸಲ್ಲಿಸತಕ್ಕದ್ದು.

( ಕೆ. ಎಸ್. ಪ್ರಭಾಕರ್ )
ಸರ್ಕಾರದ ಕಾರ್ಯದರ್ಶಿಗಳು,
ಕಂದಾಯ ಇಲಾಖೆ.

ಪ್ರತಿಯನ್ನು:-

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಬೆಂಗಳೂರು
3) ಎಲ್ಲಾ ಪ್ರಾದೇಶಿಕ ಆಯುಕ್ತರು.
4) ಎಲ್ಲಾ ಜಿಲ್ಲಾಧಿಕಾರಿಗಳು.
5) ಎಲ್ಲಾ ಉಪವಿಭಾಗಧಿಕಾರಿಗಳು/ತಹಸೀಲ್ದಾರರುಗಳು/ಉಪತಹಸೀಲ್ದಾರರುಗಳಿಗೆ.
6) ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.